ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/60/2015-16. ದಿನಾಂಕ:25-07-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಎಂ.ಶರಣಬಸವರಾಜ ತಂದೆ ಎಂ.ಶರಣಪ್ಪ<br>2)ಮಂಗಾಪುರದ ದೊಡ್ಡಕರಿಯಪ್ಪ ತಂದೆ ಚೌಡಪ್ಪ<br>ಅಮಲಾಪುರ ಗ್ರಾಮ ಕೂಡ್ಲಿಗಿ ತಾಲೂಕು | ಎಸ್.ನಾಗರಾಜ ತಂದೆ ಮೂಗಪ್ಪ<br>ಅಮಲಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಅಮಲಾಪುರ ಗ್ರಾಮದ ಸನಂ 396ಬಿ. ವಿಸ್ತೀರ್ಣ 6-37. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಅಮಲಾಪುರ ಗ್ರಾಮದ ಸನಂ 396ಬಿ. ವಿಸ್ತೀರ್ಣ 6-37. ಎಕ್ರೆ ಜಮೀನನ್ನು ಸದರಿ ಗ್ರಾಮದ ಎಂ.ಶರಣಬಸವರಾಜ ತಂದೆ ಎಂ.ಶರಣಪ್ಪ ಇವರು ದಿನಾಂಕ 29-09-2011 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಅಮಲಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 16-11-2011. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಎಸ್.ನಾಗರಾಜ ತಂದೆ ಮೂಗಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 09/2011-12. ದಿನಾಂಕ 15-11-2011. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 15-09-2015 ರಿಂದ 25-07-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಅಮಲಾಪುರ ಗ್ರಾಮದ ಸನಂ 396ಬಿ. ವಿಸ್ತೀರ್ಣ 6-37. ಎಕ್ರೆ ಜಮೀನು ಅರ್ಜಿದಾರರ ಅಜ್ಜನವರಾದ ಮಂಗಾಪುರದ ದೊಡ್ಡಕರಿಯಪ್ಪ ತಂದೆ ಚೌಡಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 18-07-1993 ರಂದು ಹಾಗೂ ಅಜ್ಜಿಯಾದ ಚನ್ನಬಸಮ್ಮ ಗಂಡ ಲೇಟ್ ದೊಡ್ಡಕರಿಯಪ್ಪ ಇವರು ದಿನಾಂಕ 13-05-1989 ರಂದು ಹಾಗೂ ಅರ್ಜಿದಾರರ ಚಿಕ್ಕಪ್ಪನಾದ ಬಸವರಾಜಪ್ಪ ತಂದೆ ಲೇಟ್ ದೊಡ್ಡಕರಿಯಪ್ಪ ಇವರು ದಿನಾಂಕ 13-09-1994 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಾಗೂ ಪಾಲು ವಿಭಾಗದ ಒಪ್ಪಿಗೆ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಈಗ ಸದ್ಯದಲ್ಲಿ ಮಂಗಾಪುರದ ದೊಡ್ಡಕರಿಯಪ್ಪ ತಂದೆ ಚೌಡಪ್ಪ ಇವರ ಹೆಸರಲ್ಲಿದ್ದು ಈ ಹಿಂದೆ ಡಯಾಗ್ಲಾಟ್ ಪ್ರಕಾರ ಪ್ರತಿವಾದಿಯ ಅಜ್ಜನಾದ ಸೂಲದಹಳ್ಳಿ ಮೂಗಪ್ಪಗಾರಿ ಬಸಪ್ಪ. ನಲ್ಲಪ್ಪ. ಇವರ ಹೆಸರಲ್ಲಿದ್ದು ಸದರಿ ಜಮೀನು ಪ್ರತಿವಾದಿಗೆ ಸಂಬಂದಿಸಿದ ಜಮೀನು ಆಗಿರುವ ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಖಾತಾ ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಈ ಪ್ರಕರಣವು ಹಕ್ಕನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟಿರುವ ಕಾರಣ ಹಾಗೂ ಸಿವಿಲ್ ಸ್ವರೂಪವೆಂದು ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಅಮಲಾಪುರ ಗ್ರಾಮದ ಸನಂ 396ಬಿ. ವಿಸ್ತೀರ್ಣ 6–37. ಎಕ್ರೆ ಜಮೀನಿನ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಕಾರಣ ಉಭಯರು ಸೂಕ್ತ ನ್ಯಾಯಾಲಯದಲ್ಲಿ ಪರಿಹಾರ ಕಂಡು ಕೊಳ್ಳಲು ಸೂಚಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 25–07–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ [illegible]
ಕೂಡ್ಲಿಗಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎಂ.ಶರಣಬಸವರಾಜ ತಂದೆ ಎಂ.ಶರಣಪ್ಪ. ಅಮಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಹೆಚ್.ಬಿ.ಶರಣನಗೌಡ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎಸ್.ನಾಗರಾಜ ತಂದೆ ಮೂಗಪ್ಪ. ಅಮಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಅಂಗಡಿ ರವಿ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.